ಅ) ನಗರ ಸಭೆಗಳಿಗೆ ಮತ್ತು ಪುರಸಭೆಗಳಿಗೆ ನೀಡುತ್ತಿರುವ ಆಕ್ಟ್ರಾಯ್ ಸಹಾಯಧನ ಜಿಲ್ಲಾ ಖಜಾನೆಗಳ ಮೂಲಕ ಸಂಬಳ ಪಾವತಿ ಮಾಡಿ ಉಳಿದ ಹಣ ಅಭಿವೃದ್ಧಿ ಕೆಲಸಗಳಿಗೆ ಬರದೇ ಸ್ಥಳೀಯ ಸಂಸ್ಥೆಗಳು ತೀವ್ರ ತೊಂದರೆ ಅನುಭವಿಸುತ್ತಿರುವುದು ನಿಜವೇ? (ವಿವರ ನೀಡುವುದು)

ಆ) ವಿಜಾಪುರ ನಗರ ಸಭೆಗೆ ಪಾವತಿಯಾಗಬೇಕಾದ ಹಣ ಎಷ್ಟು?

ಇ) 1996–97ನೇ ಸಾಲಿನಲ್ಲಿ ನಗರಸಭೆಗಳಿಗೆ ಹಾಗೂ ಪುರಸಭೆಗಳಿಗೆ ಅಭಿವೃದ್ಧಿ ಕಾಮಗಾರಿಗೆ ಎಷ್ಟು ಹಣ ಬಿಡುಗಡೆ ಮಾಡಿದೆ? ಮಾಡದೆ ಇದ್ದಲ್ಲಿ ಕಾರಣಗಳೇನು?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್, (ಪೌರಾಡಳಿತ ರಾಜ್ಯ ಸಚಿವರು):-

ಅ) ಹೌದು, ಪ್ರಸಕ್ತ ವರ್ಷದಲ್ಲಿ 12.6 ಕೋಟಿ ರೂ.ಗಳನ್ನು ಮುನ್ಸಿಪಾಲಿಟಿಗಳಿಗೆ ಬಿಡುಗಡೆ ಮಾಡಲಾಗಿದೆ.

ಆ) ರೂ. 104.00 ಲಕ್ಷಗಳು

ಇ) ಇನ್ನೂ ಇಲ್ಲ. ಸಧ್ಯದಲ್ಲಿಯೇ ಬಿಡುಗಡೆ ಮಾಡಲಾಗುವುದು.

ವಿಷಯ:- ಕುಂದಗೋಳ ಪಟ್ಟಣ ಪಂಚಾಯತಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರ

1056 (1821) **ಶ್ರೀ ಯು.ಬಿ. ಬಣಕಾರ್, (ಹಿರೇಕೆರೂರು):-** ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಧಾರವಾಡ ಜಿಲ್ಲೆ ಕುಂದಗೋಳ ಪಟ್ಟಣ ಪಂಚಾಯಿತಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಮೊತ್ತ ಎಷ್ಟು?

ಆ) ಈ ಅವ್ಯವಹಾರಕ್ಕೆ ಕಾರಣ ಯಾರು?

ಇ) ಈ ಅವ್ಯವಹಾರದ ಹಣದ ವಸೂಲಿಗೆ ಏನು ಕ್ರಮ ಕೈಗೊಳ್ಳಲಾಗಿದೆ. ಈ ಅವ್ಯವಹಾರಕ್ಕೆ ಕಾರಣರಾದವರ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಈ) ಈ ಅವ್ಯವಹಾರದ ಹಣವನ್ನು ಪುನಃ ಪಟ್ಟಣ ಪಂಚಾಯತಿಯ ಅಭಿವೃದ್ಧಿಗೆ ಹೊಸದಾಗಿ ಬಿಡುಗಡೆ ಮಾಡಲಾಗುವುದೆ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) ಈ ಬಗ್ಗೆ ತನಿಖೆ ನಡೆಯುತ್ತಿದ್ದು, ತನಿಖೆ ಪೂರ್ಣಗೊಂಡ ನಂತರವೇ ದುರುಪಯೋಗವಾದ ಹಣ ಎಷ್ಟು ಎಂಬುದು ಗೊತ್ತಾಗುತ್ತದೆ.

ಆ) ಶ್ರೀ ಎಂ.ಡಿ. ಪೂರ್ಣಗೊಂಡ ತಕ್ಷಣವೇ ಹಣವನ್ನು ವಸೂಲು ಮಾಡಲು ಕ್ರಮವನ್ನು ಕೈಗೊಳ್ಳಲಾಗುವುದು. ಇದಕ್ಕೆ ಕಾರಣರಾದ ಮುಖ್ಯಾಧಿಕಾರಿಗಳನ್ನು ದಿನಾಂಕ: 12.6.1996 ರಂದು ಸೇವೆಯಿಂದ ಅಮಾನತ್ತುಗೊಳಿಸಿದೆ.

ಈ) ಇಲ್ಲ.